# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ-3589/2015/ಡಿ.ಆರ್.ಇ-2

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 13/12/2019

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಹೆಬ್ಬೂರು ಗ್ರಾಮದ ಸರ್ವೆ ನಂ. 158 ಚಿಕ್ಕಕೆರೆ ಅಂಗಳದಲ್ಲಿ ಅನಧೀಕೃತವಾಗಿ ನಿರ್ಮಾಣವಾಗಿರುವ ಕಟ್ಟಡವನ್ನು ಹಾಗೂ ಒತ್ತುವರಿಯನ್ನು ನಿಯಮಾನುಸಾರ ಒತ್ತುವರಿ ಮಾಡಿದವರಿಗೆ ನೋಟಿಸ್ ನೀಡಿ, ಸದರಿ ಅತಿಕ್ರಮಣಗಳನ್ನು ಕಾನೂನಿನ ಅನ್ವಯ ತೆರವುಗೊಳಿಸಲು ಸೂಕ್ತ ಕ್ರಮ ಜರುಗಿಸುವುದರ ನಡವಳಿಕೆ ಕುರಿತು ವರದಿ.

*****

ಶ್ರೀ ಶ್ಯಾಮಣ್ಣ, ನಂ. 156, ಅಶೋಕ ನಗರ, ತುಮಕೂರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, (1) ತಹಶೀಲ್ದಾರ್, ತಾಲ್ಲೂಕು ಕಛೇರಿ, ತುಮಕೂರು ತಾಲ್ಲೂಕು, ತುಮಕೂರು ಮತ್ತು, (2) ಶ್ರೀ ಭಾನುಪ್ರಕಾಶ್, ರಾಜಸ್ವ ನಿರೀಕ್ಷಕರು, ಹೆಬ್ಬೂರು ಹೋಬಳಿ, ತುಮಕೂರು ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ '1 ಮತ್ತು 2ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ತುಮಕೂರು ಜಿಲ್ಲೆ ಮತ್ತು ತಾಲ್ಲೂಕು ಹೆಬ್ಬೂರಿನ ಸರ್ವೆ ನಂ. 158ರ ಚಿಕ್ಕಕೆರೆ ಅಂಗಳದಲ್ಲಿ ಅನಧಿಕೃತವಾಗಿ ನಿರ್ಮಾಣವಾಗಿರುವ ಕಟ್ಟಡಗಳನ್ನು ತೆರವುಗೊಳಿಸಲು ತುಮಕೂರು ಜಿಲ್ಲಾಧಿಕಾರಿಗಳು ಮತ್ತು ಉಪ ವಿಭಾಗಾಧಿಕಾರಿಗಳು ಆದೇಶ ನೀಡಿದ್ದರೂ ಸಹ ಎದುರುದಾರರು ಸದರಿ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸುವ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಲು ಕೋರಿರುತ್ತಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ, ಸದರಿ ದೂರಿನ ಸಂಬಂಧ ಲಭ್ಯವಿರುವ ದಾಖಲೆಗಳು ಹಾಗೂ ರಾಜಸ್ವ ನಿರೀಕ್ಷಕರು, ಹೆಬ್ಬೂರು ಹೋಬಳಿ ರವರಿಂದ ವರದಿ ಪಡೆಯಲಾಗಿ, ಹೆಬ್ಬೂರು ಗ್ರಾಮದ ಸರ್ವೆ ನಂ. 158ರಲ್ಲಿ ಸರ್ಕಾರಿ ಕೆರೆ ಅಂಗಳದ ಜಮೀನನ್ನು ಸರ್ವೆ ನಂ. 131ರ ಹಿಡುವಳಿದಾರರು 13 ಗುಂಟೆ ಹಾಗೂ ಸರ್ವೆ ನಂ. 130ರ ಹಿಡುವಳಿದಾರರು 8 ಗುಂಟೆ ವಿಸ್ತೀರ್ಣವನ್ನು ಒತ್ತುವರಿ ಮಾಡಿದ್ದು, ಸದರಿ ಒತ್ತುವರಿಯನ್ನು ಈಗಾಗಲೇ ತೆರವುಗೊಳಿಸಿ, ಕೆರೆ ಅಂಗಳದ ಸುತ್ತಲೂ ಜೆಸಿಬಿ ಯಂತ್ರದ ಮೂಲಕ ಕಂಧಕ ತೆಗೆಸಲಾಗಿರುತ್ತದೆ ಹಾಗೂ ಸರ್ವೆ ನಂ. 158ರ ದಾಖಲೆಗಳಲ್ಲಿ ಯಾವುದೇ ಅನಧಿಕೃತವಾಗಿ ಹಕ್ಕು ಬದಲಾವಣೆಗಳಾಗಿರುವುದಿಲ್ಲ. ಆದ್ದರಿಂದ, ಸದರಿ ದೂರನ್ನು ಮುಕ್ತಾಯಗೊಳಿಸಬೇಕೆಂದು ಕೋರಿರುತ್ತಾರೆ.

4. ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ, ಸದರಿ ಕೆರೆಯ ಒತ್ತುವರಿಯನ್ನು ಈವರೆವಿಗೂ ಸಹ ಎದುರುದಾರರು ತೆರೆವುಗೊಳಿಸಿರುವುದಿಲ್ಲ. ಸದರಿ ಕಟ್ಟಡಗಳನ್ನು ತೆರವುಗೊಳಿಸಿರುವ ಬಗ್ಗೆ ಸುಳ್ಳು ಮಾಹಿತಿಯನ್ನು ನೀಡಿದ್ದಾರೆ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಲು ಕೋರಿರುತ್ತಾರೆ.

5. ಈ ಪ್ರಕರಣದ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಆರಕ್ಷಕ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ತುಮಕೂರು ರವರಿಗೆ ವಹಿಸಲಾಗಿತ್ತು. ಸದರಿಯವರು ಈ ಪ್ರಕರಣದ ತನಿಖೆ ನಡೆಸಿ ವರದಿ ನೀಡಿದ್ದು, ಅವರು ತಮ್ಮ ವರದಿಯಲ್ಲಿ, ಸರ್ವೆ ನಂ. 130ರ ಮಾಲೀಕರು ಸದರಿ ಕೆರೆಯ ಪ್ರದೇಶದಲ್ಲಿ ಮುಕ್ಕಾಲು ಗುಂಟೆ ಜಾಗವನ್ನು ಒತ್ತುವರಿ ಮಾಡಿರುವ ಬಗ್ಗೆ ಭೂಮಾಪನ ಇಲಾಖೆಯ ಅಧಿಕಾರಿಗಳಿಂದ ಅಳತೆ ಮಾಡಿ, ಸ್ಕೆಚ್ ತಯಾರಿಸಿ, ಸರ್ವೆ ಕಲ್ಲುಗಳನ್ನು ಹಾಕಿದ್ದು, ಸರ್ವೆ ನಂ. 158ರಲ್ಲಿ ಖಾಸಗಿ ವ್ಯಕ್ತಿ ಒತ್ತುವರಿ ಮಾಡಿ, ಕಟ್ಟಡ ನಿರ್ಮಿಸಿರುವ ಬಗ್ಗೆ ಸರ್ವೆ ಅಧಿಕಾರಿಗಳು ದೃಢಪಡಿಸಿರುವುದಿಲ್ಲ. ಸರ್ವೆ ನಂ. 131ರ ಹಿಡುವಳಿದಾರರು ಸರ್ವೆ ನಂ. 158ರಲ್ಲಿ 13 ಗುಂಟೆ ಪ್ರದೇಶವನ್ನು ಒತ್ತುವರಿ ಮಾಡಿದ್ದು, ಅದನ್ನು ಜೆಸಿಬಿ ಯಂತ್ರದ ಮೂಲಕ ತೆರವುಗೊಳಿಸಿ, ತಮ್ಮ ವಶಕ್ಕೆ ಪಡೆದು ಕಲ್ಲು ಕಂಬಗಳನ್ನು ಅಳವಡಿಸಲಾಗಿದೆ. ಸರ್ವೆ ನಂ. 158ರ ಒಟ್ಟು ವಿಸ್ತೀರ್ಣ 15 ಗುಂಟೆ ಇದ್ದು, ಅದರಲ್ಲಿ 13 ಎಕರೆ 5 ಗುಂಟೆ ಉಳಿದಿದ್ದು, ಉಳಿದ 3 ಎಕರೆ ಪ್ರದೇಶ ಕೆ.ಎಸ್.ಆರ್.ಟಿ.ಸಿ., ಬಸ್ ನಿಲ್ದಾಣ ನಿರ್ಮಿಸಲು, 3 ಎಕರೆ ಪ್ರದೇಶವನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣ

ನಿರ್ಮಿಸಲು, ಅದೇ ರೀತಿ 10 ಗುಂಟೆ ಜಮೀನನ್ನು ಸ್ತ್ರೀ ಶಕ್ತಿ ಭವನ ನಿರ್ಮಿಸಲು ಜಿಲ್ಲಾಧಿಕಾರಿಗಳು ಮಂಜೂರು ಮಾಡಿರುವುದು ಕಂಡುಬರುತ್ತದೆ. ಸದರಿ ಸರ್ವೆ ನಂಬರ್‌ನಲ್ಲಿ 1 ಎಕರೆ 8 ಗುಂಟೆ ಜಮೀನನ್ನು ಮುಸ್ಲಿಂ ಸಮುದಾಯದವರು ಒತ್ತುವರಿ ಮಾಡಿ, ಈದ್ಗಾ ಮೈದಾನ ನಿರ್ಮಿಸಿದ್ದು ಹಾಗೂ ಈದ್ಗಾ ಮೈದಾನದ ಕಡೆಗೆ ಸರ್ವೆ ನಂ. 155 ಮತ್ತು 156ರ ಹಿಡುವಳಿದಾರರು ಸುಮಾರು 30 ಅಡಿ ಅಗಲದ ಮತ್ತು 138 ಮೀಟರ್ ಉದ್ದದ ರಸ್ತೆಯನ್ನು ಅನಧಿಕೃತವಾಗಿ ನಿರ್ಮಿಸಿಕೊಂಡಿದ್ದು, ಈ ಎರಡು ಒತ್ತುವರಿಗಳನ್ನು ತೆರವುಗೊಳಿಸಿರುವುದಿಲ್ಲ. ದೂರುದಾರರು ಸರ್ವೆ ನಂ. 130ರ ಉತ್ತರ ದಿಕ್ಕಿಗೆ ಶ್ರೀ ಷಡಕ್ಷರಪ್ಪ ರವರು ಶ್ರೀ ಹೆಚ್.ಎಂ.ರೇವಣ್ಣಾರಾಧ್ಯ ರವರಿಗೆ ದಿನಾಂಕ: 05/10/1972ರಲ್ಲಿ 20 X 10 ಗಜ ಜಾಗವನ್ನು ಮಾರಾಟ ಮಾಡಿದ ಬಗ್ಗೆ ಕಂದಾಯ ದಾಖಲೆಗಳಲ್ಲಿ ನಮೂದು ಮಾಡದೇ ಇರುವುದನ್ನು ಎತ್ತಿ ತೋರಿಸಿ, ಸದರಿ ಪ್ರದೇಶದಲ್ಲಿ ಒತ್ತುವರಿಯಾಗಿರುವ ಬಗ್ಗೆ ಆಪಾದಿಸಿರುತ್ತಾರೆ. ಆದರೆ, ಸರ್ವೆ ನಂ. 130ರ ಮಾಲೀಕರಾದ ಶ್ರೀ ಷಡಕ್ಷರಪ್ಪ ರವರು ಎಂ.ಆರ್. ನಂ. 11/2004–05 ದಿನಾಂಕ: 18/10/2004 ರಂದು 8 ಗುಂಟೆ ಪ್ರದೇಶವನ್ನು ವಿಭಜನೆ ಮಾಡಿ, ತಮ್ಮ ಮೊಮ್ಮಗಳಾದ ಸಿ.ನಂದಿತಾ ಬಿನ್ ಟಿ.ಎನ್.ಚಂದ್ರಶೇಖರ್ ರವರಿಗೆ ದಾಖಲೆಗಳನ್ನು ಮಾಡಿಸಿದ್ದು, ಅದಕ್ಕೂ ಹಿಂದೆ ಮಾರಾಟ ಮಾಡಿದ 60 X 30 ಅಡಿ ಜಾಗವನ್ನು ವಿಭಜನೆ ಮಾಡದೇ ಇರುವುದರ ಬಗ್ಗೆ ಆಕ್ಷೇಪಿಸಿರುತ್ತಾರೆ. ಕಾರಣ, ಸದರಿ ಸರ್ವೆ ನಂಬರಿನ ಜಮೀನಿನಲ್ಲಿ ಯಾವುದೇ ಒತ್ತುವರಿ ಮಾಡಿರುವುದಿಲ್ಲ. ಈ ಹಿಂದೆ ಮಾಡಲಾದ ಒತ್ತುವರಿಯನ್ನು ತೆರವುಗೊಳಿಸಿ, ಸರ್ಕಾರದ ವಶಕ್ಕೆ ಪಡೆಯಲಾಗಿದೆಯೆಂದು ಹೇಳಿರುತ್ತಾರೆ.

6. ಆರಕ್ಷಕ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ತುಮಕೂರು ರವರ ವರದಿಯ ಪ್ರತಿಯನ್ನು ಎದುರುದಾರರಿಗೆ ಕಳುಹಿಸಿ, ಅವರ ಆಕ್ಷೇಪಣೆ ಕೇಳಲಾಗಿ, ಎದುರುದಾರರು ಯಾವುದೇ ಉತ್ತರವನ್ನು ಸಲ್ಲಿಸಿರುವುದಿಲ್ಲ.

7. ದಿನಾಂಕ: 23/08/2017 ರಂದು ಸ್ಥಳ ಪರಿಶೀಲನೆ ಮಾಡಲಾಗಿ, ಸದರಿ ಸರ್ವೆ ನಂಬರಿನಲ್ಲಿ 23 ಎಕರೆ 15 ಗುಂಟೆ ಕೆರೆಗೆ ಸಂಬಂಧಿಸಿದ ಜಮೀನಿದ್ದು, ಅದರಲ್ಲಿ ಕೆ.ಎಸ್.ಆರ್.ಟಿ.ಸಿ., ಬಸ್ ನಿಲ್ದಾಣಕ್ಕೆ 3 ಎಕರೆ ಜಮೀನು ಸ್ತ್ರೀ ಶಕ್ತಿ ಭವನಕ್ಕೆ 10 ಗುಂಟೆ ಜಮೀನು, ಎಪಿಎಂಸಿ ಯಾರ್ಡ್‌ಗೆ 3 ಎಕರೆ ಜಮೀನು ಸರ್ಕಾರದಿಂದ ಮಂಜೂರಾಗಿರುತ್ತದೆ. ಅವುಗಳನ್ನು ಹೊರತುಪಡಿಸಿ, 17 ಎಕರೆ 5 ಗುಂಟೆ ಜಮೀನು ಬಾಕಿ ಇದ್ದು, ಅದರಲ್ಲಿ ಹೆಬ್ಬೂರಿನಿಂದ ರಾಮೇನಹಳ್ಳಿಗೆ ಹೋಗುವ ರಸ್ತೆ ಸರ್ವೆ ನಂ. 158ರ

ಜಮೀನಿನಲ್ಲಿಯೇ ಹಾದು ಹೋಗಿರುತ್ತದೆ. ಅದೇ ರೀತಿ, ಸದರಿ 13 ಗುಂಟೆ ಜಮೀನಿನಲ್ಲಿ ಅನಧಿಕೃತವಾಗಿ ರಸ್ತೆ ನಿರ್ಮಿಸಿರುತ್ತಾರೆ. ಸದರಿ ರಸ್ತೆ ಅಕ್ಕಪಕ್ಕದ ಜಮೀನುಗಳಿಗೆ ಹೋಗುವ ರಸ್ತೆಯಾಗಿರುತ್ತದೆ ಹಾಗೂ 1 ಎಕರೆ 8 ಗುಂಟೆ ಜಮೀನಿನಲ್ಲಿ ಇಸ್ಲಾಂ ಜನಾಂಗದವರು ಪ್ರಾರ್ಥನಾ ಸ್ಥಳ ಮತ್ತು ಖಾಲಿ ಜಾಗವನ್ನು ಬಿಟ್ಟುಕೊಂಡಿರುತ್ತಾರೆ. ಸದರಿ ಪ್ರದೇಶವು ಸರ್ಕಾರದಿಂದ ಮಂಜೂರಾಗಿರುವುದಿಲ್ಲ. ಸರ್ವೆ ನಂ. 158ರ ಜಮೀನಿಗೆ ಸಂಬಂಧಪಟ್ಟಂತೆ, ಹಾಜರುಪಡಿಸಲಾದ ಕಂದಾಯ ಇಲಾಖೆಯ ಎಲ್ಲಾ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಸರ್ವೆ ನಂ. 158ರ ಜಮೀನಿಗೆ ಸಂಬಂಧಪಟ್ಟಂತೆ, ಹಾಜರುಪಡಿಸಲಾದ ಕಂದಾಯ ಇಲಾಖೆಯ ಎಲ್ಲಾ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಸರ್ವೆ ನಂ. 158ರ 2 ಎಕರೆ 15 ಗುಂಟೆ ಜಮೀನು ಹೆಬ್ಬೂರು ಕೆರೆಗೆ ಸಂಬಂಧಿಸಿದ ಜಮೀನಾಗಿರುತ್ತದೆ. ಸದರಿ ಜಮೀನಿನಲ್ಲಿ ಈಗಾಗಲೇ ಕೆ.ಎಸ್.ಆರ್.ಟಿ.ಸಿ., ಬಸ್ ನಿಲ್ದಾಣಕ್ಕೆ 3 ಎಕರೆ ಜಮೀನು, ಸ್ತ್ರೀ ಶಕ್ತಿ ಭವನಕ್ಕೆ 10 ಗುಂಟೆ ಜಮೀನು, ಎಪಿಎಂಸಿ ಯಾರ್ಡ್‌ಗೆ 3 ಎಕರೆ ಜಮೀನು, ಹೆಬ್ಬೂರಿನಿಂದ ರಾಮೇನಹಳ್ಳಿಗೆ ಹೋಗುವ ರಸ್ತೆ, 13 ಗುಂಟೆ ಜಮೀನಿನಲ್ಲಿ ಅನಧಿಕೃತವಾಗಿ ರಸ್ತೆ ಹಾಗೂ 1 ಎಕರೆ 8 ಗುಂಟೆ ಜಮೀನಿನಲ್ಲಿ ಇಸ್ಲಾಂ ಜನಾಂಗದವರು ಪ್ರಾರ್ಥನಾ ಸ್ಥಳ ಮತ್ತು ಖಾಲಿ ಜಾಗಕ್ಕೆ ಅನಧಿಕೃತವಾಗಿ ಒತ್ತುವರಿ ಮಾಡಿರುತ್ತಾರೆ. ಇದಕ್ಕೆ ಪುಷ್ಟೀಕರಿಸುವಂತೆ ತನಿಖಾಧಿಕಾರಿಯು ಹಾಜರುಪಡಿಸಿರುವ ಸ್ಥಳ ಮಹಜರ್ ಮತ್ತು ನಕ್ಷೆ ಇರುತ್ತದೆ. ಸದರಿ ನಕ್ಷೆಯನ್ನು ಭೂಮಾಪಕರು, ಪರ್ಯಾವೇಕ್ಷಕರು ಹಾಗೂ ತಹಶೀಲ್ದಾರ್, ತುಮಕೂರು ರವರು ನೀಡಿದ್ದಾರೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

8. ದಿನಾಂಕ: 22/11/2018 ರಂದು ಉಪವಿಭಾಗಾಧಿಕಾರಿಗಳು, ತುಮಕೂರು ಉಪ ವಿಭಾಗ ರವರು ಒತ್ತುವರಿ ತೆರವುಗೊಳಿಸಿದ್ದ ಬಗ್ಗೆ ವರದಿ ಸಲ್ಲಿಸಲು ತಿಳಿಸಲಾಗಿತ್ತು, ಅವರು ಸದರಿ ಪತ್ರದ ಉಲ್ಲೇಖ-3ರ ತಹಶೀಲ್ದಾರ್, ತುಮಕೂರು ರವರ ವರದಿಯನ್ನು ಸಲ್ಲಿಸಿ, ಅಳತೆಯಂತೆ ಹೆಬ್ಬೂರು ಗ್ರಾಮದ ಸರ್ವೆ ನಂ. 158ರ ದಕ್ಷಿಣ ಭಾಗದಲ್ಲಿರುವ ಲಾ.ಗು.ಸ ನಂ. 130ರ ಉತ್ತರ ಭಾಗದಲ್ಲಿ ಒತ್ತುವರಿ ಇಲ್ಲ, ಗ್ರಾಮಸ್ಥರ ಮಹಜರ್ ವರದಿಯಲ್ಲಿ ತಿಳಿಸಿದ್ದಾರೆ. ಅಲ್ಲದೇ, ಲೋಕಾಯುಕ್ತ ಆರಕ್ಷಕ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ತುಮಕೂರು ರವರು ಕಂದಾಯ ಸಿಬ್ಬಂದಿಯೊಂದಿಗೆ ಸ್ಥಳ ತನಿಖೆ ನಡೆಸಿ ಕಾಂಪ್ಲೆಕ್ಸ್‌ನಲ್ಲಿ ಒತ್ತುವರಿ ಇಲ್ಲ, ಇತರೆ ಒತ್ತುವರಿ ಬಗ್ಗೆ ಸ್ವಯಂ ತೆರವುಗೊಳಿಸಲು ಸೂಚಿಸಲಾಗಿತ್ತು, ದರ್ಗಾದ ಅಧ್ಯಕ್ಷರು ನೋಟಿಸಿಗೆ ಯಾವುದೇ ಸಮಜಾಯಿಷಿ ನೀಡಿರುವುದಿಲ್ಲ ಮತ್ತು ಅದು ಸೂಕ್ಷ್ಮ ವಿಚಾರವಾಗಿದೆ. ಒತ್ತುವರಿ ತೆರವಿಗೆ ಕಾಲಾವಕಾಶ ನೀಡಲಾಗಿದೆ ಅಂತಾ ಉಲ್ಲೇಖಿಸಿದ್ದಾರೆ. ಆದರೆ,

ಸದರಿ ವರದಿಯಿಂದಲೇ ಸಂಪೂರ್ಣವಾಗಿ ಒತ್ತುವರಿ ತೆರೆವುಗೊಂಡಿಲ್ಲ ಎಂಬುದು ಮೇಲ್ನೋಟಕ್ಕೆ ಸ್ಪಷ್ಟವಾಗುತ್ತದೆ.

9. ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯ **ಸಿವಿಲ್ ಅಪೀಲ್** ನಂ. 1132/2011, **ಎಸ್.ಎಲ್.ಪಿ.** (ಸಿ) ನಂ. 3109/2011 **ಜಗಪಾಲ್ ಸಿಂಗ್ ಮತ್ತು ಇತರರು ವಿರುದ್ಧ ಪಂಜಾಬ್ ರಾಜ್ಯ ಮತ್ತು ಇತರರು ಮತ್ತು ಗೌರವಾನ್ವಿತ ಮದ್ರಾಸ್ ಉಚ್ಛ ನ್ಯಾಯಾಲಯ ಎಲ್.ಕೃಷ್ಣನ್ ವಿರುದ್ಧ ತಮಿಳುನಾಡು ರಾಜ್ಯ** 2005(4) **ಸಿಟಿಸಿ(1) ಮದ್ರಾಸ್** ನಿರ್ಣಿತ ತೀರ್ಮಗಳಲ್ಲಿ ಮತ್ತು ಸರ್ಕಾರಿ ಸುತ್ತೋಲೆಗಳನ್ವಯ ಯಾವುದೇ ಕೆರೆ ಅಥವಾ ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿಟ್ಟ ಸರ್ಕಾರಿ ಜಮೀನುಗಳನ್ನು ಯಾವುದೇ ಉದ್ದೇಶಕ್ಕಾಗಿ ಮಂಜೂರು ಅಥವಾ ಪರಿವರ್ತನೆ ಮಾಡತಕ್ಕದ್ದಲ್ಲ, ಒಂದು ವೇಳೆ ಈ ರೀತಿ ಒತ್ತುವರಿ ಅಥವಾ ಮಂಜೂರು ಮಾಡಿದ್ದಲ್ಲಿ, ತಕ್ಷಣ ಸರ್ಕಾರದ ವಶಕ್ಕೆ ಪಡೆದು ಯಾವ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿತ್ತೋ, ಆ ಉದ್ದೇಶಕ್ಕೆ ಮೀಸಲಿಡುವಂತೆ ನಿರ್ದೇಶಿಸಲಾಗಿದೆ. ಆದರೆ, ಸದರಿ ಜಮೀನು ಕೆರೆಯ ಉದ್ದೇಶಕ್ಕಾಗಿ ಮೀಸಲಿಟ್ಟಿದ್ದು, ಅದರಲ್ಲಿ ಕೆಲ ವ್ಯಕ್ತಿಗಳು ಮತ್ತು ಸಂಘ ಸಂಸ್ಥೆಗಳು ವಿವಿದ ಉದ್ದೇಶಕ್ಕಾಗಿ ಒತ್ತುವರಿ ಮಾಡಿರುವುದು ಕಂಡುಬರುತ್ತದೆ. ಎಪಿಎಂಸಿ ಯಾರ್ಡ್‌ಗೆ ಮಂಜೂರಾದ 3 ಎಕರೆ ಜಮೀನಿನ ಪೂರ್ವ ದಿಕ್ಕಿನ ಪ್ರವೇಶ ಧ್ವಾರದ ಬಳಿ ತುಮಕೂರು-ಕುಣಿಗಲ್ ರಸ್ತೆ ಕಡೆಗೆ ಸರ್ವೆ ನಂ. 130ರ ಮಾಲೀಕರು ಅಂಗಡಿ ಮಳಿಗೆ ಕಟ್ಟಿದ್ದು, ಸದರಿ ಅಂಗಡಿ ಮಳಿಗೆ ಹಾಗೂ ಎಪಿಎಂಸಿ ಯಾರ್ಡ್‌ನ ಸ್ಥಳದ ಮಧ್ಯೆ ಹದ್ದುಬಸ್ತು ಕಲ್ಲುಗಳನ್ನು ಅಳವಡಿಸಿದ್ದು, ಸದರಿ 2 ಹದ್ದುಬಸ್ತು ಕಲ್ಲುಗಳನ್ನು ನೇರವಾಗಿ ಅಳವಡಿಸದೇ ಸರ್ವೆ ನಂ. 158ರ ಕಡೆಗೆ ವಾಲಿರುವುದು ಕಂಡುಬರುತ್ತದೆ. ಇದರಿಂದ, ಸರ್ವೆ ನಂ. 130ರ ಜಮೀನಿನ ಅಂಗಡಿಯ ಮಾಲೀಕರು ಸುಮಾರು ಅರ್ಧ ಅಡಿ ಸರ್ವೆ ನಂ. 158ರ ಜಮೀನಿನಲ್ಲಿ ಒತ್ತುವರಿ ಮಾಡಿ, ಮೆಟ್ಟಿಲು ನಿರ್ಮಿಸಿರುವುದು ಕಂಡುಬರುತ್ತದೆ.

10. ಆದ್ದುದರಿಂದ, ಮೇಲೆ ಉಲ್ಲೇಖಿಸಿದ ಕಾರಣಗಳಿಗಾಗಿ, ಹೆಬ್ಬೂರು ಗ್ರಾಮದ ಸರ್ವೆ ನಂ. 158 ಚಿಕ್ಕಕೆರೆ ಅಂಗಳದಲ್ಲಿ ಅನಧೀಕೃತವಾಗಿ ನಿರ್ಮಾಣವಾಗಿರುವ ಕಟ್ಟಡವನ್ನು ಹಾಗೂ ಒತ್ತುವರಿಯನ್ನು ನಿಯಮಾನುಸಾರ ಒತ್ತುವರಿ ಮಾಡಿದವರಿಗೆ ನೋಟಿಸ್ ನೀಡಿ, ಸದರಿ ಅತಿಕ್ರಮಣಗಳನ್ನು ಕಾನೂನಿನ ಅನ್ವಯ ತೆರೆವುಗೊಳಿಸಲು ಸೂಕ್ತ ಕ್ರಮ ಜರುಗಿಸಬೇಕಾಗಿ ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

11. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984, ಕಲಂ 12(2) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಈ ವರದಿ ಮುಟ್ಟಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

17/12/19

**[ನ್ಯಾಯಮೂರ್ತಿ ಬಿ.ಎಸ್.ಪಾಟೀಲ]**

**ಉಪಲೋಕಾಯುಕ್ತರು,**

**ಕರ್ನಾಟಕ ರಾಜ್ಯ, ಬೆಂಗಳೂರು.**